# KHANNUR VIDYANIKETHAN SCHOOL, RANEBENNUR

## MID TERM EXAMINATION OCTOBER 2020

**Grade – VI Subject – KANNADA Marks – 40**

---

## (USE KANNADA HW NOTEBOOK TO ANSWER)

**ವಿಭಾಗ–ಎ (ವಾಚನ ಮತ್ತುಗ್ರಹಿಕಾ ಕೌಶಲ) :6ಅಂಕಗಳು**

1. ಕೆಳಗಿನ ಗದ್ಯಭಾಗಓದಿಕೊಂಡುಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ:

ಕೊರಾನಾಅಥವಾಕರೋನಾ ವೈರಸ್‌ಒಂದು ಬಗೆಯ ಪ್ರಾಣಹಾನಿ ಉಂಟು ಮಾಡುವಂತಹ ವೈರಸ್‌ಆಗಿದ್ದು, ಇದು ಮನುಷ್ಯನ ಸಹಿತ ಸಸ್ತನಿಗಳ ಉಸಿರಾಟದ ವ್ಯವಸ್ಥೆ ಮೇಲೆ ಪರಿಣಾಮ ಬೀರುವುದುಎಂದು ಹೇಳಲಾಗುತ್ತಿದೆ.ಈ ವೈರಸ್ ನಿಂದಾಗಿ ಸಾಮಾನ್ಯ ಶೀತ, ನ್ಯುಮೋನಿಯಾ ಮತ್ತುತೀವ್ರರೀತಿಯ ಶ್ವಾಸಕೋಶದ ಸಮಸ್ಯೆ ಕಾಣಿಸಿಕೊಳ್ಳುವುದು ಕೊರೊನಾ ವೈರಸ್‌ಎಂದರೆ ಸಾಮಾನ್ಯ ವೈರಸ್‌ಗಳ ಒಂದು ಗುಂಪು ಹಾಗೂ ವೈರಸ್‌ಗಳ ಮೇಲ್ಮೈಯಲ್ಲಿಕಿರೀಟದಂತಹ ವಿನ್ಯಾಸವಿರುವಕಾರಣದಿಂದಾಗಿ ಹೀಗೆ ಹೆಸರಿಸಲಾಗಿದೆ.ಕೆಲವು ಕೊರೊನಾ ವೈರಸ್ ಕೇವಲ ಪ್ರಾಣಿಗಳ ಮೇಲೆ ಮಾತ್ರ ಪರಿಣಾಮ ಬೀರುವುದು.ಇನ್ನು ಕೆಲವು ವೈರಸ್‌ಗಳು ಮನುಷ್ಯರ ಮೇಲೆ ಕೂಡ ಪರಿಣಾಮ ಬೀರುವುದು.ಮನುಷ್ಯರನ್ನುಕಾಡುವಂತಹಕೊರೊನಾ ವೈರಸ್‌ನ ವಿಧಗಳು ಮೆರ್ಸ್ ಮತ್ತು ಸಾರ್ಸ್ ವೈರಸ್‌ಗಳು.ಕೊರೊನಾ ವೈರಸ್ ಹಬ್ಬುವುದು ಹೇಗೆಂದರೆ *ಸಾಮಾನ್ಯವಾಗಿಕೊರೊನಾ ವೈರಸ್‌ಒಬ್ಬ ಮನುಷ್ಯನಿಂದ ಮತ್ತೊಬ್ಬನಿಗೆ ಹಬ್ಬುವುದು.*ಶೀನು ಮತ್ತುಕೆಮ್ಮಿನ ಗಾಳಿಯಿಂದ.*ತುಂಬಾ ಹತ್ತಿರದೈಹಿಕ ಸಂಪರ್ಕದಿಂದ.ಉದಾಹರಣೆಗೆ ಸ್ಪರ್ಶ ಮತ್ತು ಹಸ್ತಲಾಘವ *ವೈರಸ್‌ಇರುವ ವಸ್ತುವನ್ನು ಮುಟ್ಟುವುದು, ಇದರ ಬಳಿಕ ಬಾಯಿ, ಮೂಗು ಅಥವಾ ಕಣ್ಣುಗಳನ್ನು ಕೈ ತೊಳೆಯದೆ ಮುಟ್ಟಿದರೆ. ಹಬ್ಬುವುದು.

1. ಕೊರೊನಾ ವೈರಸ್‌ಎಂದರೇನು?
2. ಕೊರೊನಾ ವೈರಸ್‌ನಿಂದಯಾವ ಸಮಸ್ಯೆಉಂಟಾಗುತ್ತದೆ?
3. ಕೊರೊನಾ ವೈರಸ್‌ನ ವಿಧಗಳು ಯಾವವು?
4. ಕೊರೊನಾ ವೈರಸ್ ಹೇಗೆ ಹಬ್ಬುವುದು?
5. ವಸ್ತುವನ್ನು ಪದವನ್ನು ಬಿಡಿಸಿ ಬರೆಯಿರಿ.

**ವಿಭಾಗ –ಬಿ (ಬರವಣಿಗೆಯ ಕೌಶಲ) 4: ಅಂಕಗಳು**

2. ಎರಡು ದಿನ ರಜೆಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ. 4

**ವಿಭಾಗ – ಸಿ (ಅನ್ವಯಿಕ ವ್ಯಾಕರಣ) :10ಅಂಕಗಳು**

3. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆಉತ್ತರ ಬರೆಯಿರಿ:
   1. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ: 2
      1. ಸೂರ್ಯ 2. ಸಂಭ್ರಮ
   2. ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ: 2
      1. ಅಪರಾಧ 2. ಬಡವ
   3. ಈ ಪದವನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ: 2
      1. ದೇಶಭಕ್ತ 2. ಮನಸೋಲು
   4. ಈ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ತಿಳಿಸಿ: 2
      1. ಪುಸ್ತಕವನ್ನು 2. ಚಳಿಗಾಲ
   5. ಈ ಪದಗಳ ವಚನ ರೂಪಬದಲಿಸಿ ಬರೆಯಿರಿ: 2
      1. ಚಿತ್ರಗಳು 2. ಗಿಡ

*P.T.O…*

## ವಿಭಾಗ – ಡಿ (ಪದ್ಯಗಳ ಅಧ್ಯಯನ)

**4. ಕೆಳಗಿನ ಪ್ರತಿ ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದಉತ್ತರವನ್ನು ಆರಿಸಿ ಬರೆಯಿರಿ: 12**

1. ಭೂಮಿಯ ಪೋಷಕಯಾರು?
   ಎ) ತಾಯಿ ಬಿ) ಸೂರ್ಯ ಸಿ) ಚಂದ್ರ ಡಿ) ನಕ್ಷತ್ರ
2. ಬಿರು ಬಿಸಿಲಿಗೆ ಯಾವುವುಕಂಗಾಲಾಗಿಲ್ಲ?
   ಎ) ಪ್ರಾಣಿಗಳು ಬಿ) ಪಕ್ಷಿಗಳು ಸಿ) ಮನುಷ್ಯರು ಡಿ) ಮರ–ಗಿಡ, ಪೊದೆ–ಬಳ್ಳಿಗಳು
3. ರಾಜೇಂದ್ರ ಪ್ರಸಾದರುತಾವುಯಾರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು?
   ಎ) ರಾಜರ ಸೇವಕ ಬಿ) ಶ್ರೀಮಂತರ ಸೇವಕ ಸಿ) ಜನರ ಸೇವಕ ಡಿ) ದೇವರ ಸೇವಕ
4. ಜಾಕಿರ್ ಹುಸೇನರು ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಯಾವ ವೇಷ ಹಾಕಿದರು?
   ಎ) ಬಡವನ ಬಿ) ಹಣ್ಣು ಮಾರುವ ಸಿ) ಬಿಕ್ಷುಕ ಡಿ) ಬೂಟ್‌ಪಾಲಿಶ್
5. ಮಂತ್ರಿಅರಮನೆಗೆ ಬಂದುರಾಜನ ಕಾಲಿಗೆ ಬಿದ್ದು ___________ಹೇಳಿದ.
   ಎ) ನಿಜಾಂಶ ಬಿ) ಸುಳ್ಳನ್ನು ಸಿ) ಮಿಥ್ಯಾಂಶ ಡಿ) ಎಲ್ಲಾ ಸರಿ
6. ಗಂಧರ್ವಸೇನಯಾರು?
   ಎ) ಮಹಾರಾಜ ಬಿ) ಮಹಾಮಂತ್ರಿ ಸಿ) ರಾಜಭಟ ಡಿ) ಮಡಿವಾಳ್ತಿಯ ಪ್ರೀತಿಯಕತ್ತೆ
7. ಯಾರಿಗಾಗಿ ಶ್ರೀಕೃಷ್ಣನ ಬಳಿ ಸಹಾಯ ಕೇಳಲು ಸುಧಾಮನ ಪತ್ನಿ ಹೇಳುತ್ತಾಳೆ?
   ಎ) ಮಕ್ಕಳಿಗಾಗಿ ಬಿ) ತನಗಾಗಿ ಸಿ) ಊರಿನವರಿಗಾಗಿ ಡಿ) ರಾಜ್ಯಕ್ಕಾಗಿ
8. ಸುದಾಮನ ಮನೆಯನ್ನು ಕಟ್ಟಿಸಿದವರು ಯಾರು?
   ಎ) ಊರಿನವರು ಬಿ) ಹೆಂಡತಿ ಸಿ) ಶ್ರೀ ಕೃಷ್ಣ ಡಿ) ಎಲ್ಲರೂ
9. ರಾಜಕುಮಾರರ ಹುಟ್ಟೂರುಯಾವುದು?
   ಎ) ಗಾಜನೂರು ಬಿ) ಹಾಸನ ಸಿ) ಬೆಂಗಳೂರು ಡಿ) ಬೀದರ್
10. 'ಮುತ್ತುರಾಜ' ಎಂಬುದುಯಾರ ಹುಟ್ಟು ಹೆಸರು?
    ಎ) ಶಿವರಾಜ ಕುಮಾರ್ ಬಿ) ಪುನೀತ್‌ರಾಜಕುಮಾರ್ ಸಿ) ರಾಘವೇಂದ್ರರಾಜಕುಮಾರ್ ಡಿ) ಡಾ.ರಾಜಕುಮಾರ್
11. ರಾಜಕುಮಾರರು ಮೊದಲು ನಾಯಕನಟರಾದ ಸಿನಿಮಾಯಾವುದು?
    ಎ) ಬೇಡರಕಣ್ಣಪ್ಪ ಬಿ) ಸಂಪತ್ತಿಗೆ ಸವಾಲ್ ಸಿ) ಧ್ರುವತಾರೆ ಡಿ) ಗಂಧದಗುಡಿ
12. 1992ರಲ್ಲಿ ಕರ್ನಾಟಕ ಸರ್ಕಾರವುರಾಜಕುಮಾರರಿಗೆ ನೀಡಿದ ಪ್ರಶಸ್ತಿ ಯಾವುದು?
    ಎ) ಕರ್ನಾಟಕರತ್ನ ಬಿ) ಭಾರತರತ್ನ ಸಿ) ಪಂಪ ಡಿ) ಪದ್ಮಶ್ರೀ

**5. ಕೊಟ್ಟಿರುವ ಪ್ರಶ್ನೆಗೆಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:**

1. ರಾಜೇಂದ್ರ ಪ್ರಸಾದ್‌ಅವರ ವ್ಯಕ್ತಿತ್ವವನ್ನು ವಿವರಿಸಿರಿ. 2
2. ಊರಿನಜನರು ಮುತ್ತುರಾಜ ಜನಿಸಿದಾಗ ಏಕೆ ಸಂಭ್ರಮಪಟ್ಟರು? 2

**6. ಕೆಳಗಿನ ಮಾತುಗಳನ್ನು ಯಾರು, ಯಾರಿಗೆ, ಯಾವಾಗ ಹೇಳಿದರು?**

1. "ಹಸಿದಿರುವ ಮಕ್ಕಳಿಗೋಸ್ಕರನಾದರೂ ಹೋಗಿ ಕೇಳಿ." 2
2. "ರಾಜಅಲ್ಲಿಯೂ ಕರುಳು ಕಿತ್ತು ಬರುವಂತೆ ಅಳತೊಡಗಿದ." 2

*****

**SUBMIT THIS ANSWER NOTE BOOK TO GRADE BUILDING ON THE LAST DAY OF YOUR MID TERM EXAM**